ಸೋಲಿಗರ ನಡುವೆ ಹರಡಿದ. ಕಲ್ಲಿನ ಶಿಲ್ಪಗಳನ್ನೇ ನೋಡದ ಸೋಲಿಗರಿಗೆ ಇದು ಸಾಕ್ಷಾತ್ ಕೇತೇ ದೇವರಾಗಿ ಕಂಡು ಬಂದಿದ್ದು ಆಶ್ಚರ್ಯವೇನಲ್ಲ. ಅಂತೂ ಈ ಕೇತೇದೇವರನ್ನು ಶಿಕಾರಿ ಬಂಗಲೆಯ ಸಮೀಪ ಒಂದು ಹುಲ್ಲು ಗುಡಿಯಲ್ಲಿರಿಸಿ ಪೂಜೆ ಪ್ರಾರಂಭಮಾಡಿದರು. ಕ್ರಮೇಣ ಈ ದೇವರ ಮಹಾತ್ಮೆ ಹೆಚ್ಚಾಗುತ್ತ 'ದೇವರನ್ನು ಕೇಳುವುದು' ಅಥವ ದೇವರು ಮೈಮೇಲೆ ಬರುವುದು ಎಲ್ಲವೂ ಪ್ರಾರಂಭವಾಯಿತು. ಹೀಗೆ ಎಲ್ಲವೂ ಸಾಂಗವಾಗಿ ನಡೆಯತ್ತಿರುವಾಗಲೇ ಈ ಹುಲ್ಲು ಗುಡಿಗೆ ಬೆಂಕಿ ಬೀಳ ಬೇಕೆ? ಕ್ಯಾತೇ ದೇವರೇ ಬೆಂದು ಹೊಗುತ್ತಿರುವಾಗ ಭಕ್ತರು ಸುಮ್ಮನಿರಲು ಹೇಗೆ ಸಾಧ್ಯ? ಪಕ್ಕದಲ್ಲೆ ಇದ್ದ ಕೆರೆಯಿಂದ ಹತ್ತಾರು ಕೊಡ ನೀರನ್ನು ಹೊತ್ತು ತಂದು ಬೆಂಕಿ ನಂದಿಸಿದರು. ಈ ಗಡಿಬಿಡಿಯಲ್ಲಿ ಒಬ್ಬ ಸೋಲಿಗ ಇಡೀ ಕೊಡಪಾನ ನೀರನ್ನು ಕಾದು ಕೆಂಪಗಾಗಿದ್ದ 'ಕೇತೇದೇವರ' ಪ್ರತಿಮೆಯ ಮೇಲೆ ಸುರಿದೇ ಬಿಟ್ಟ. ಕಾದ ಕಲ್ಲಿಗೆ ನೀರು ತಟ್ಟಿದ್ದೆ ತಡ ವಿಗ್ರಹ ಒಡೆದು ಸೀಳಿ ಬಿಟ್ಟಿತು. ತಮ್ಮ ಅತ್ಯಂತ ಪ್ರೀತಿಯ ಕೇತೇದೇವರು ಒಡೆದು ಹೋದದ್ದನ್ನೂ ಸೋಲಿಗರು ಒಪ್ಪಿಕೊಳ್ಳಲೂ ಸಿದ್ಧರಿರಲಿಲ್ಲ. ಅದನ್ನು ಮೊದಲಿನ ಹಾಗೆ ಸೇರಿಸಿ, ಸುತ್ತಮುತ್ತ ಕಲ್ಲುಗಳನ್ನು ಒತ್ತರಿಸಿ ಮತ್ತೆ ಮೊದಲ ಸ್ವರೂಪಕ್ಕೆ ತಂದರು. ಆದರೆ ಹುಲ್ಲು ಗುಡಿ ಕಟ್ಟುವ ಸಾಹಸಕ್ಕೆ ಕೈಹಾಕಲಿಲ್ಲ, ಗಾರೆ ಇಟ್ಟಿಗೆಗಳ ಕಟ್ಟಡ ಸೋಲಿಗರಿಗೆ ಸಾಧ್ಯವೇ ಇರಲಿಲ್ಲ. ಹಾಗಾಗಿ ಕೇತೇದೇವರಿಗೆ ಬಯಲೇ ಆಲಯವಾಯಿತು. ಬಿಸಿಲು–ಮಳೆಗೆ ಬಳಲಿ ಬೆಂಡಾಗುತ್ತಿದ್ದ ಈ ಕೇತೇದೇವರಿಗೆ ಶ್ರೀ ಮನ್ಮಹಾರಾಜರೂ ಕೈ ಮುಗಿಯುತ್ತಿದ್ದುದುಂಟು. ಮಸಣಮ್ಮನ ಪ್ರಕಾರ ಮಹಾರಾಜರ ಸಮ್ಮುಖದಲ್ಲಿ, ಕೇತೇದೇವರ ಎದುರು ತಮ್ಮಡಿಯೊಬ್ಬನಿಗೆ ದೇವರು ಮೈಮೇಲೆ ಬಂದು ಮಾಸ್ವಾಮಿಗಳನ್ನು ಗದರಿಸಿ ಕೇಳಿತು! "ನೀನಾದರೆ ಅರಮನೆ, ಬಂಗಲಿ ಕಟ್ಟಿಸಿಕೊಂಡಿದ್ದೀಯ, ಜೀಪಿನಲ್ಲಿ ತಿರುಗಾಡ್ತೀಯ. ನಾನು ಈ ಕಾಡಿನಲ್ಲಿ ಮಳೆ – ಬಿಸಿಲು – ಬೆಂಕಿ ನಡುವೆ ಮನೆ ಇಲ್ದೆ ಬಿದ್ದಿದ್ದೀನಿ, ನನಗಾಗಿ ನೀನು ಏನು ಮಾಡಿದ್ದೀಯಾ?" ದೇವರು ಹೀಗೆ ಹೇಳಿದ್ದೇ ತಡ ಮಹಾರಾಜರು ತಕ್ಷಣ ಗುಡಿ ನಿರ್ಮಾಣ ಮಾಡಲು ಆರ್ಡರ್ ಮಾಡಿದರು. ಹೀಗೆ ಕಲ್ಲು – ಸಿಮೆಂಟುಗಳ ಗುಡಿ ನಿರ್ಮಾಣವಾಯಿತು. ನಾನು ಪದೇ ಪದೇ 'ಗುಡಿ' ಪದವನ್ನು ಬಳಸಿದ್ದರಿಂದ ಅಸಮಾಧಾನಗೊಂಡ ಮಸಣಮ್ಮ "ಇದು ಗುಡಿಯಲ್ಲ ಸ್ವಾಮಿ ದೇವಸ್ಥಾನ" ಎಂದು ನನ್ನನ್ನು ತಿದ್ದಿದಳು. ಸೋಲಿಗರ ಪ್ರಕಾರ ಗುಡಿ ಅಥವ 'ಕಲ್ಲುಗುಡಿ' ಎಂದರೆ ಮೂರು – ನಾಲ್ಕು ಅಡಿ ಅಗಲವಿರುವ ಕಿರಿದಾದ ಒಂದು ಕಲ್ಲು ಮಂಟಪ. ಎರಡು ದೊಡ್ಡ ಕಲ್ಲುಗಳನ್ನು ಅಡ್ಡಲಾಗಿ ಜೋಡಿಸಿ ಅದರ ಮೇಲೊಂದು ಚಪ್ಪಡಿ ಪೇರಿಸಿದರೆ ಸಾಕು ಕಲ್ಲು ಗುಡಿ ತಯಾರಾಗಿ ಬಿಡುತ್ತದೆ. ಇದರೊಳಗೆ ನಾಲ್ಕಾರು ದುಂಡನೆಯ ಕಲ್ಲುಗಳನ್ನೂ ಸೇರಿಸಿದರೆ ಸಾಕು ದೇವರ ಪ್ರತಿಷ್ಠಾಪನೆಯಾಗುತ್ತದೆ. ಆದರೆ ಮಹಾರಾಜರು ಕಟ್ಟಿಸಿದ್ದು ದೇವಸ್ಥಾನ. ಸುಮಾರು ಹತ್ತು ಅಡಿ ಅಗಲವಿದೆ! ಅದರೊಳಗೆ ಕೇತೇದೇವರು ಕುಳಿತಿದ್ದಾರೆ. ಇದನ್ನು ಕೇವಲ 'ಗುಡಿ' ಎಂದು ಸಂಬೋಧಿಸುವುದು ತರವಲ್ಲ ಎಂಬುದು ಮಸಣಮ್ಮನ ಇಂಗಿತ. ಮಹಾರಾಜರು ಕಟ್ಟಿಸಿದ ದೇವಸ್ಥಾನದಲ್ಲಿ ಕೇತೇದೇವರಿಗೆ 'ಎಳನೀರಿನ ಮದ್ದನ', 'ಹಾಲಿನ ಮದ್ದನ' ಮುಂತಾದ ವೈಭವಗಳು ನಡೆದದ್ದು ಮಸಣಮ್ಮನ ನೆನಪಿನಲ್ಲಿ ಕಿಂಚಿತ್ತೂ ಮಾಸಿಲ್ಲ. ಈ ವೈಭವಗಳನ್ನು ವರ್ಣನೆ ಮಾಡುವಾಗ ಮಸಣಮ್ಮ ಉತ್ಸಾಹದ ಚಿಲುಮೆಯಾಗುತ್ತಿದ್ದಳು. "ಅಂಥಾ ದೊಡ್ಡ ಮಹಾರಾಜನೂ ಮಾತು ಕೇಳೋಹಂಗೆ" ಮಾಡಿದ ತನ್ನ ದೇವರ ಬಗ್ಗೆ ಮಸಣಮ್ಮನಿಗೆ ಬಹಳ ಅಭಿಮಾನ. ಆದರೆ ಅವಳು ಆಗಾಗ 'ಮದ್ದನ–ಮದ್ದನ' ಎಂದು ಹೇಳುತ್ತಿದ್ದುದರ ಅರ್ಥ ನನಗೆ ಗೊತ್ತಾಗಲಿಲ್ಲ. ಬಹುಶಃ ಅದು 'ಮಜ್ಜನ' ಇರಬೇಕು.

ಸೋಲಿಗರ ಕಾಡಿನ ಪಾಡು ಕಂಡು ಮರುಗಿದ ಮಹಾರಾಜರಿಗೆ ಸೋಲಿಗರಿಗೆ ಕಾಡಿನಿಂದ ಮುಕ್ತಿ ದೊರಕಿಸಿ ಕೊಡಬೇಕೆಂಬ ಭಾವನೆಯುಂಟಾಯಿತಂತೆ. 'ಕಾಡ ಜನಗಳನ್ನ ನಾಡ ಜನಗಳನ್ನಾಗಿ